
# “ಆರಂಭಿಕೆಯ ಆರಂಭ”

## ಅಂಗನವಾಡಿ ಮಕ್ಕಳ ‘35’ ಚಟುವಟಿಕೆಗಳು




**ಅಂಗನವಾಡಿ ಶಿಕ್ಷಕರಿಗಾಗಿ ಚಟುವಟಿಕೆಯ ಪುಸ್ತಕ**

# ಅಂಗನವಾಡಿ ಶಿಕ್ಷಕರನ್ನು ಕುರಿತು

**ಮಾನ್ಯ ಅಂಗನವಾಡಿ ಕಾರ್ಯಕರ್ತರಿಗೆ,**

ಈ ಪುಸ್ತಕವನ್ನು ಅಭಿವೃದ್ಧಿಪಡಿಸಲು ಮಹತ್ವದ ಕಾರಣವೆಂದರೆ ನೀವುಗಳು, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕಾರಣಕರ್ತರು ನೀವು ಮತ್ತು ಮಕ್ಕಳ ಭವಿಷ್ಯ ನಿರ್ಧಾರವಾಗುವಲ್ಲಿ ಪ್ರಮುಖ ಪಾತ್ರ ನಿಮ್ಮದಾಗಿರುತ್ತದೆ. ಅಂಗನವಾಡಿಯಲ್ಲಿ ಮಕ್ಕಳು ಗಳಿಸುವ ಅನುಭವ ಮತ್ತು ಪ್ರೇರಣೆ ಬುದ್ಧಿ ವಿಕಾಸಕ್ಕೆ ಬಹುಮುಖ್ಯವಾಗುತ್ತದೆ. ಮುಂದಿನ ಶೈಕ್ಷಣಿಕ ಬದುಕಿಗೆ ಉತ್ತಮ ಬುನಾದಿಯಾಗುತ್ತದೆ. ಮನೆಯಲ್ಲಿರುವಾಗ ಮಕ್ಕಳ ಬೆಳವಣಿಗೆಗೆ ಪೋಷಕರ ಪಾತ್ರ ಅತಿ ಮುಖ್ಯವಾಗುವಂತೆ ಅಂಗನವಾಡಿಯಲ್ಲಿ ಕಲಿಯುವ ಆರಂಭಿಕ ಶಿಕ್ಷಣ, ಬಾಲ್ಯದ ಬೆಳವಣಿಗೆಗೆ ಸಮನಾದುದು ಅಷ್ಟೇ ಮಹತ್ವದ್ದು. ಅಂಗನವಾಡಿಯ ಪರಿಸರ, ಚಟುವಟಿಕೆಗಳು ಮತ್ತು ಶಿಕ್ಷಣ ಮಕ್ಕಳ ಆರಂಭಿಕ ಬದುಕಿನ ಮೊದಲ ಹಂತವಾಗಿರುತ್ತದೆ.

ಆರಂಭಿಕ ಪ್ರೇರಣೆ ಎಂದರೇನು? ಅದು ಏಕೆ ಮುಖ್ಯವಾಗುತ್ತದೆ?

ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಮತ್ತು ಬುದ್ಧಿ ವಿಕಾಸಕ್ಕೆ ಅವರಿರುವ ವಾತಾವರಣದ ಪ್ರಭಾವವೇ ಹೆಚ್ಚಾಗಿರುತ್ತದೆ. ಮಕ್ಕಳ ಬೆಳವಣಿಗೆಯ ಐದು ಮುಖ್ಯ ಅಂಶಗಳು ಇಂತಿವೆ.

1) ದೈಹಿಕ ಬೆಳವಣಿಗೆ
2) ಸಾಮಾಜಿಕ ಬೆಳವಣಿಗೆ
3) ಭಾಷಣ ಕೌಶಲ ಮತ್ತು ಭಾಷೆಯ ಬೆಳವಣಿಗೆ
4) ಬುದ್ಧಿ / ಜ್ಞಾನದ ಬೆಳವಣಿಗೆ
5) ಭಾವನಾತ್ಮಕ ಬೆಳವಣಿಗೆ

ಮಕ್ಕಳ ಬೆಳವಣಿಗೆಯ ಆರಂಭಿಕ ಪ್ರೇರಣೆಗಳೆಂದರೆ ದೈಹಿಕ ಸಬಲತೆ ಮತ್ತು ಇಂದ್ರಿಯಜ್ಞಾನ (ಪಂಚೇಂದ್ರಿಯಗಳು–ದೃಷ್ಟಿ, ಶ್ರವಣ, ಸ್ಪರ್ಶ, ರುಚಿ, ನಾಸಿಕ) ಅವುಗಳನ್ನು ಒದಗಿಸುವುದು ಅಗತ್ಯವಾಗುತ್ತದೆ. ಮಕ್ಕಳ ಆರಂಭಿಕ ಪ್ರೇರಣೆ ಬೌದ್ಧಿಕ ಬೆಳವಣಿಗೆಗೂ ಸಹಕಾರಿಯಾಗುತ್ತದೆ. ಮಕ್ಕಳ ಸಮರ್ಪಕ ಬೆಳವಣಿಗೆಯು ಆರಂಭದ ಹಂತದಲ್ಲಿ ಉತ್ತೇಜನ ಪೂರಕವಾಗಿರಬೇಕು. ಇಲ್ಲದೇ ಹೋದರೆ ಕಲಿಕೆಯಲ್ಲಿ ವಿಧಾನ ಬೆಳವಣಿಗೆಯ ಕೊರತೆ, ವರ್ತನೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಆರಂಭಿಕ ಉತ್ತೇಜನದ ಮೂಲಕ ಮಕ್ಕಳಲ್ಲಿ ಹಲವು ಬದಲಾವಣೆ ಕಾಣಬಹುದು. ಈ ಚಟುವಟಿಕೆಗಳು ಮಕ್ಕಳ ಕೌಶಲ ಮತ್ತು ಸಾಮರ್ಥ್ಯವನ್ನು ಹೆಚ್ಚು ಮಾಡುತ್ತದೆ.

## ಆರಂಭಿಕ ಪ್ರೇರಣೆ ಯಾರಿಗೆ ಅಗತ್ಯ?

ಸಾಮಾನ್ಯವಾಗಿ ಆರಂಭಿಕ ಪ್ರೇರಣೆ ಎಲ್ಲ ಮಕ್ಕಳಿಗಾಗಿ ಉದಾಹರಣೆಗೆ 0–6 ವರ್ಷಗಳ ಮಕ್ಕಳಿಗಾಗಿ. ಇದು ಕ್ಲಿಷ್ಟಕರ ಸಂದರ್ಭ, ಈ ಸಂದರ್ಭದಲ್ಲಿ ಮಕ್ಕಳ ಸಾಮರ್ಥ್ಯ ಬೆಳವಣಿಗೆ ನಿರ್ಣಯವಾಗುತ್ತದೆ. ಕಾರಣವೆಂದರೆ ಈ ಸಂದರ್ಭವು ಪ್ರಾಥಮಿಕ ಬೆಳವಣಿಗೆಗಳಾದ ಮಕ್ಕಳ ದೈಹಿಕ / ಸಾಮಾಜಿಕ / ಭಾವನಾತ್ಮಕ / ಜ್ಞಾನದ ಬೆಳವಣಿಗೆಯ ಕೊರತೆಗಳು ಆರಂಭಿಕ ಕೌಶಲಗಳು ಬೆಳವಣಿಗೆ ಆಗುವ ಹಂತ.

ಆರಂಭದಲ್ಲಿ ಆಕಸ್ಮಿಕವಾಗಿ ಮಕ್ಕಳಲ್ಲಿ ಬೆಳವಣಿಗೆಯಲ್ಲಿ ಕೊರತೆ ಮತ್ತು ಅಸಮರ್ಪಕತೆ ಕಂಡು ಬಂದರೆ ಚಟುವಟಿಕೆಗಳನ್ನು ಮುಂದುವರೆಸಬೇಕು.

ಈ ಪುಸ್ತಕದ ಉಪಯೋಗ ಮತ್ತು ಚಟುವಟಿಕೆಗಳ ಕಾರ್ಯರೂಪ

ಈ ಪುಸ್ತಕದಲ್ಲಿರುವ ಚಟುವಟಿಕೆಗಳು ಐದು ಭಾಗವಾಗಿ ವಿಂಗಡಿಸಲಾಗಿದೆ. ಮಾತು ಮತ್ತು ಭಾಷೆಯ ಬೆಳವಣಿಗೆ, ಸಾಮಾಜಿಕ ಬೆಳವಣಿಗೆ, ಜ್ಞಾನದ ಬೆಳವಣಿಗೆ, ಭಾವನೆಗಳ ಬೆಳವಣಿಗೆ ಮತ್ತು ಜ್ಞಾನದ ಬೆಳವಣಿಗೆ. ಈ ಐದು ಬೆಳವಣಿಗೆ ಮಕ್ಕಳ ಸರ್ವತೋಮುಖ ಬೆಳವಣಿಗೆಗಾಗಿ. ನಿಮ್ಮ ಬುದ್ಧಿ ಮತ್ತು ಕೆಲವು ಸಮಯ ಮಕ್ಕಳ ಜೊತೆ ಕಳೆಯುವ ಮೂಲಕ, ಸರಳ ವಿಧಾನವನ್ನು ಅನುಸರಿಸಿ, ಕೆಲವೇ ವಸ್ತುಗಳನ್ನು ಉಪಯೋಗಿಸುವ ಮೂಲಕ ಮಹತ್ತರ ಬದಲಾವಣೆ ತರಬಹುದು ಈಗಾಗಲೇ ಅಂಗನವಾಡಿಯಲ್ಲಿರುವ ಆಟಿಕೆಗಳು, ನಕ್ಷೆಗಳು ವಸ್ತುಗಳನ್ನು ಉಪಯೋಗಿಸಿ ನಡೆಸುವ ಚಟುವಟಿಕೆಗಳು ರೂಢಿಯಲ್ಲಿವೆ. ಇನ್ನುಳಿದವು ಅತಿ ಕಡಿಮೆ ವೆಚ್ಚದ ಬಹು ಸುಲಭವಾಗಿ ಲಭ್ಯವಿರುವ ವಸ್ತುಗಳಾಗಿವೆ. ಎಷ್ಟೋ ಚಟುವಟಿಕೆಗಳಿಗೆ ಯಾವ ವಸ್ತುವೂ ಬೇಕಿಲ್ಲ. ಆಟವಾಡುತ್ತಲೇ ಎಷ್ಟೋ ಚಟುವಟಿಕೆಗಳು ಕಾರ್ಯರೂಪಗೊಳ್ಳುತ್ತದೆ. ಈ ಚಟುವಟಿಕೆಗಳನ್ನು ಅಂಗನವಾಡಿ ಕೇಂದ್ರದಲ್ಲಿ ಪ್ರಯೋಗ ನಡೆಸಿಯೇ ರಚಿಸಿರುವದರಿಂದ ಸುಲಭದಾಯಕವಾದುದಾಗಿದೆ.

ನಮಗಾಗಲೇ ತಿಳಿದರುವಂತೆ ಜೆ.ಟಿ.ಸಿ.ಯವರು ಹಲವು ಚಟುವಟಿಕೆಯ ಪುಸ್ತಕಗಳನ್ನು ನಿಮಗೆ ನೀಡಿದ್ದಾರೆ. ಉಳಿದ ಕೆಲವು ಮಾಹಿತಿಗಳನ್ನು ಈ ಪುಸ್ತಕ ನೀಡುತ್ತಿದೆ. ಪರಿಕಲ್ಪನೆಗಳ ಆಧಾರದ ಮೇಲೆ ಈ ಪುಸ್ತಕ ರೂಪಗೊಂಡಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಉಪಯುಕ್ತವಾಗುವಂತೆ ಐದು ವಿಭಾಗಗಳಲ್ಲಿ ರೂಪುಗೊಂಡಿದೆ. ಐದು ಹಂತಗಳಲ್ಲಿ ಮಕ್ಕಳ ಚಟುವಟಿಕೆಗಳು ಉಪಯುಕ್ತವಾದುದಾಗಿದೆ. ಈ ಚಟುವಟಿಕೆಗಳು ಮಕ್ಕಳಿಗೆ ಪ್ರಾಥಮಿಕವಾಗಿ ಬೆಳೆಯಲು ಸಹಕಾರಿಯಾಗಬಹುದು. ಉಳಿದ ಸಂದರ್ಭಗಳಲ್ಲಿ ಮಕ್ಕಳ ಸಮಗ್ರ ಚಟುವಟಿಕೆಗೆ ಸಹಕರಿಸಿ. ಸೂಕ್ಷ್ಮ ದೈಹಿಕ ಚಟವಟಿಕೆಗಳು ಅರಿವಿನ ಶಕ್ತಿಯನ್ನು ಹೆಚ್ಚಿಸುತ್ತವೆ. ಭಾವನಾತ್ಮಕ ಬೆಳವಣಿಗೆ ಸಾಮಾಜಿಕವಾಗಿ ಅಗತ್ಯವಿರುವ ಕೌಶಲಗಳನ್ನು ಹೆಚ್ಚಿಸುತ್ತವೆ. ಪರಸ್ಪರ ಸಂಬಂಧವುಳ್ಳ ಚಟುವಟಿಕೆಗಳು ಇದಾಗಿದೆ.


ಈ ಚಟುವಟಿಕೆಗಳ ಅನುಷ್ಠಾನಕ್ಕೆ ತರುವ ಸಂದರ್ಭದಲ್ಲಿ ನಿಮಗೆ ಪೂರ್ಣ ಸ್ವಾತಂತ್ರ್ಯವಿದೆ. ದಿನಕ್ಕೆ ಐದು ಚಟುವಟಿಕೆಗಳನ್ನು ಆರಿಸಿ ಸಿಗುವ ಅವಕಾಶ ಉಪಯೋಗಿಸಿ ಹಂತ ಹಂತವಾಗಿ ಮಕ್ಕಳ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಪ್ರತಿ ಚಟುವಟಿಕೆಯ ಕಾಲಾವಕಾಶ 10–15 ನಿಮಿಷಗಳು. ಉತ್ತೇಜನ ಪೂರ್ವಕವಾಗಿ ಅನೌಪಚಾರಿಕವಾಗಿ ಈ ಕ್ರಿಯೆಗಳನ್ನು ಆರಂಭಿಸಿ ದಿನ ನಿತ್ಯದ ಚಟುವಟಿಕೆಗಳು ಮಕ್ಕಳಲ್ಲಿ ಮಹತ್ತರವಾದ ಬೆಳವಣಿಗೆ ತರುತ್ತದೆ. ಮಕ್ಕಳ ಬದುಕಿನಲ್ಲೂ ಬದಲಾವಣೆ ತರುತ್ತದೆ. ನಿಮ್ಮ ಕೇಂದ್ರಗಳಿಗೆ ಬರುವ ಮಕ್ಕಳು ವಿಭಿನ್ನ ಪರಿಸರದಿಂದ ಬಂದಿರುತ್ತಾರೆ. ಅವರಿಗೆ ಉತ್ತೇಜನ ಪೂರ್ವಕವಾದ ಶಿಕ್ಷಣ ಅಗತ್ಯ, ಅಂಗನವಾಡಿಯಲ್ಲಿ ಕಳೆಯುವ, ಮಕ್ಕಳ ಸಮಯ ಮಹತ್ವದಾಯಕವಾದದ್ದು.

ಆದ್ದರಿಂದ ನಿಮಗೆಲ್ಲರಿಗೂ ಈ ಸಂದರ್ಭ ಉತ್ತಮ ಫಲದಾಯಕವಾಗಿರುತ್ತದೆ. ಮಕ್ಕಳೊಡನೆ ಕಾಲ ಕಳೆಯುವಾಗ ಈ ಪುಸ್ತಕ ಉಪಯುಕ್ತವಾಗುತ್ತದೆ.

ನಿಮ್ಮ ವಿದೇಯ ,

ಯೋಜನಾ ಸಿಬ್ಬಂದಿ
ಸಮುದಾಯ ಮಕ್ಕಳ ಮತ್ತು ಕಿಶೋರ ಮಾನಸಿಕ ಆರೋಗ್ಯ ಸೇವಾ ಯೋಜನೆ
ಮಕ್ಕಳ ಮನಶಾಸ್ತ್ರ ಮತ್ತು ಕಿಶೋರ ಮನಃಶಾಸ್ತ್ರ ವಿಭಾಗ,
ನಿಮ್ಹಾನ್ಸ್

## ಮಕ್ಕಳ ಸರ್ವತೋಮುಖ ಬೆಳವಣಿಗೆಯ ಭಿನ್ನ ನೆಲೆಗಳು





# ದೈಹಿಕ ಬೆಳವಣಿಗೆ

| ಸಾಮರ್ಥ್ಯ ಮತ್ತು ಕೌಶಲ್ಯಗಳು | ಚಟುವಟಿಕೆಗಳು ಮತ್ತು ಅವಕಾಶಗಳು |
|---|---|
| ಇಂದ್ರಿಯಾನುಭವಗಳು ದೃಷ್ಟಿ, ಶ್ರವಣ, ರುಚಿ, ನಾಸಿಕ ಮತ್ತು ಸ್ಪರ್ಶ | ವರ್ಣಮಯ ವಸ್ತುಗಳನ್ನು ಮಕ್ಕಳಿಗೆ ತೋರಿಸುವುದು, ಆಟಿಕೆಗಳನ್ನು ಉಪಯೋಗಿಸಿ ಶಬ್ಧ ಮಾಡುವುದು, ಭಿನ್ನ ಮೇಲ್ಪದವಿರುವ ಆಟಿಕೆಗಳನ್ನು ಮುಟ್ಟಲು ನೀಡುವುದು / ಭಿನ್ನ ರುಚಿಯ ಆಹಾರಗಳನ್ನು ನೀಡುವುದು / ಮರಳು / ನೀರಿನಾಟ. |
| ಸಮಗ್ರ ದೈಹಿಕ ಚಟುವಟಿಕೆ : ವಸ್ತುವನ್ನು ಹಿಡಿಯುವ ಸಾಮರ್ಥ್ಯ | ದೈಹಿಕ ಆಟ / ಓಟ / ನೆಗೆತ / ಹಗ್ಗದಾಟ / ಈಜುವುದು |
| ಸೂಕ್ಷ್ಮ ದೈಹಿಕ ಚಟುವಟಿಕೆ ಆರಂಭಿಕ ಬರವಣಿಗೆಯ ಕೌಶಲ, ಕಣ್ಣು ಕೈಗಳ ನಡುವಿನ ಸಹಕಾರ | ಮಣಿಕಟ್ಟು ಎಣಿಕೆ, ಬಣ್ಣ ಬಳಿಯುವುದು, ಸರಣಿ ಜೋಡಿಸುವಿಕೆ, ವಿವಿಧ ಆಕಾರಗಳ ಚಿತ್ರ ಬಿಡಿಸುವುದು ಚುಕ್ಕೆ ಜೋಡಣೆ, ಬೆರಳುಗಳ ವರ್ಣ, ಮರಳ ಮೇಲೆ ಬರವಣಿಗೆ, ಎಲ್ಲರೂ ಒಗ್ಗೂಡುವುದು. |
| ಸ್ವ ಸಹಾಯಕ್ಕಾಗಿ ದೈಹಿಕ ಕೌಶಲದ ಅವಶ್ಯಕತೆ; ಬಟನ್ ಒತ್ತುವಿಕೆ, ಬಣ್ಣ ಬಳಿಯುವಿಕೆ, ಉಣಿಸುವುದು ಮುಂತಾದವು | ಸೂಚನೆ, ಮಾದರಿ, ಚಿತ್ರಗಳು, ಆಟಿಕೆಗಳ ಮುರಿದು ಜೋಡಿಸುವುದು, ಆಕಾರಗಳು |

# ದೈಹಿಕ ಬೆಳವಣಿಗೆಗಾಗಿ ಚಟುವಟಿಕೆಗಳು

## ಆ.ಸಮಗ್ರ ದೈಹಿಕ ಚಟುವಟಿಕೆಯ ಕೌಶಲ್ಯಗಳು

## ಚಟುವಟಿಕೆ 1: ಚೆಂಡು ಎಸೆತ

**ಬೇಕಾದ ವಸ್ತುಗಳು–**
ಚೆಂಡು, ಆಟಿಕೆ ಅಥವಾ ವರ್ಣಮಯ ವಸ್ತು



### ವಿಧಾನ

- ವೃತ್ತಾಕಾರವಾಗಿ ಮಕ್ಕಳಿಗೆ ಕುಳಿತುಕೊಳ್ಳಲು ಹೇಳುವುದು.
- ಚೆಂಡನ್ನು ಎಸೆಯಲು ಮಕ್ಕಳಿಗೆ ಹೇಳಿ ಮಾತನಾಡಲು ಹೇಳುವುದು ಉದಾಹರಣೆಗೆ ಬೆಳಗಿನ ತಿಂಡಿ ಏನು? ಅಥವಾ ಇಷ್ಟವಾದ ಬಣ್ಣ ಯಾವುದು?
- ಮಕ್ಕಳಿಗೆ ಚೆಂಡನ್ನು ಪರಸ್ಪರ ಎಸೆಯಲು ಹೇಳಿ – ಯಾರ ಬಳಿ ಚೆಂಡು ಇರುತ್ತದೋ ಆ ಮಗುವು ಪ್ರಶ್ನೆಗೆ ಉತ್ತರಿಸಬೇಕು.

# ಚಟುವಟಿಕೆ 2: ರೈಲಿನ ಆಟ

ಬೇಕಾದ ವಸ್ತುಗಳು–

–



## ವಿಧಾನ

- ಮಕ್ಕಳಿಗೆ ಸಾಲಾಗಿ ನಿಲ್ಲಲು ಹೇಳುವುದು, ಪರಸ್ಪರ ಭುಜ, ಸೊಂಟಗಳನ್ನು ಹಿಡಿದು ನಿಲ್ಲಿಸುವುದು.
- ರೈಲಿನ ಶಬ್ಧ ಮಾಡುವಂತೆ ಮಕ್ಕಳಿಗೆ ಸೂಚಿಸುವುದು.
- ರೈಲು ಎತ್ತ ಕಡೆ ಸಾಗುತ್ತಿದೆ ಎಂದು ಕೇಳುವುದು–ಸ್ಥಳಗಳನ್ನು ಸೂಚಿಸುವುದು (ಉದಾಹರಣೆ ಅವರವರ ನಗರಗಳ ಹೆಸರು).
- ರೈಲಿನಂತೆ ಚಲಿಸಲು ಹೇಳುವುದು.
- ನಿಧಾನ ಮತ್ತು ವೇಗದ ಚಲನೆಯನ್ನು ಕಲಿಸುವುದು.

ಬೇರೆ ಬೇರೆ ನಿಲ್ದಾಣಗಳಲ್ಲಿ ನಿಲ್ಲುವಂತೆ ಹೇಳುವುದು. ಸ್ಥಳದ ಹೆಸರುಗಳನ್ನುಸೂಚಿಸುವಂತೆ ಹೇಳುವುದು (ಉದಾಹರಣೆಗೆ–ಜಯನಗರ, ಬಸವನಗುಡಿ, ಚಾಮರಾಜಪೇಟೆ..)

# ವಿಧಾನಚಟುವಟಿಕೆ 3: ತೊಡಕುಗಳ ದಾರಿ



**ಬೇಕಾದ ವಸ್ತುಗಳು–**
ಸೀಮೆಸುಣ್ಣ



**ವಿಧಾನ**

- ನೆಲದ ಮೇಲೆ ಮೂರು ಸಾಲುಗೆರೆಗಳನ್ನು ಎಳೆಯಬೇಕು. ಮಧ್ಯದಲ್ಲಿ ಮೂರು ಭಾರಿ ಅಚಿತರವಿರಲಿ.
- ನೇರ ರಸ್ತೆಯಲ್ಲಿ ಚಲಿಸಲು ಹೇಳುವುದು ಮತ್ತು ಮೊದಲು ಒಂದು ಹಳ್ಳ ಮತ್ತೊಂದು ಕಲ್ಲು ಮತ್ತು ಮುರಿದ ಮರ.
- ಸಿಕ್ಕ ತೊಡಕುಗಳನ್ನು ಎಚ್ಚರಿಕೆಯಿಂದ ದಾಟಿ ಸಾಗಬೇಕು.

ಮಕ್ಕಳು ಎಚ್ಚರಿಕೆಯಿಂದ ಸಿಗುವ ಹಳ್ಳ, ಕಲ್ಲು ಮತ್ತು ಮುರಿದ ಮರ ದಾಟಿ ಅಡೆತಡೆ ಇಲ್ಲದೆ ಗುರಿ ಮುಟ್ಟಬೇಕು.

# ಚಟುವಟಿಕೆ 4: ಪ್ರಾಣಿಯ ಆಟ

## ಬೇಕಾದ ವಸ್ತುಗಳು

–





## ವಿಧಾನ

- ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಲು ಹೇಳುವುದು.
- ಎಲ್ಲರಿಗೂ ಒಂದೊಂದು ಪ್ರಾಣಿಯನ್ನು ಆಯ್ಕೆ ಮಾಡಿಕೊಳ್ಳಲು ಹೇಳುವುದು.
- ಯಾವ ಪ್ರಾಣಿ ಆಯ್ಕೆ ಮಾಡಿಕೊಳ್ಳುವರೋ ಅದರಂತೆ ಅನುಕರಣೆ ಮಾಡಲು ಹೇಳಿ ಉದಾಹರಣೆ: ಹಕ್ಕಿಯಂತೆ ಹಾರುವುದು, ರೆಕ್ಕೆ ಬಡಿಯುವುದು, ಮೊಲದಂತೆ / ಕಪ್ಪೆಯಂತೆ ಎಗರುವುದು, ಪೆಂಗ್ವಿನ್‌ನಂತೆ.
- ಅಂತೆಯೇ ಪ್ರಾಣಿಯಂತೆ ಶಬ್ಧ ಮಾಡಲು ಹೇಳುವುದು.
- ಪ್ರತಿ ಮಗುವಿನ ಅನುಕರಣೆಯನ್ನು ಗುರುತಿಸಿ ಮತ್ತೊಂದು ಮಗುವಿಗೆ ಯಾವ ಪ್ರಾಣಿ ಎಂದು ಗುರುತಿಸಲು ಹೇಳುವುದು.





# ಚಟುವಟಿಕೆ 5: ಬೊಂಬೆ ಆಟ



ಬೇಕಾದ ವಸ್ತುಗಳು

-





## ಆಡುವುದು ಹೇಗೆ

- ➢ ಶಿಕ್ಷಕರು ಹೊರಡಲು ಸೂಚಿಸಿದಾಗ ಮಕ್ಕಳು ಕೋಣೆಯ ಸುತ್ತಲೂ ವೃತ್ತಾಕಾರವಾಗಿ ನಡೆಯಬೇಕು.
- ➢ ಶಿಕ್ಷಕರು ನಿಲ್ಲಲು ಹೇಳಿದಾಗ ನಿಂತಂತೆ ಬೊಂಬೆಯಂತೆ ನಿಲ್ಲಬೇಕು.
- ➢ ಮತ್ತೆ ಹೊರಡಲು ಹೇಳಿದಾಗ ಮುಂದೆ ಸಾಗಬೇಕು.



# ಚಟುವಟಿಕೆ 6: ಆರಿಸಿ ಜೋಡಿಸಿ

**ಬೇಕಾದ ವಸ್ತುಗಳು–**
ಆಟಿಕೆಗಳುಳ್ಳ ಚೀಲ

## ವಿಧಾನ

- ಮಕ್ಕಳಿಗೆ ವಿಭಿನ್ನವಾದ ಆಟಿಕೆಗಳುಳ್ಳ ಚೀಲವನ್ನು ನೀಡುವುದು.
- ನೆಲದ ಮೇಲೆ ವೃತ್ತಗಳನ್ನು ಹಾಕುವುದು.
- ಬಣ್ಣದ ಮೂಲಕ / ಶಬ್ದ ಮಾಡುವ ಹೇಗೆ ಆಟಿಕೆಗಳನ್ನು ಬೇರೆ ಬೇರೆ ಮಾಡಿ ವೃತ್ತದೊಳಗಿಡುವುದು





# ಬ. ಸೂಕ್ಷ್ಮ ದೈಹಿಕ ಚಟುವಟಿಕೆಯ ಕೌಶಲ್ಯಗಳು

## ಚಟುವಟಿಕೆ 7: ಬೆರಳುಗಳ ಚಲನೆಗೆ

### ಬೇಕಾದ ವಸ್ತುಗಳು

–



### ವಿಧಾನ

- ಮಕ್ಕಳ ಜೊತೆ ವೃತ್ತಾಕಾರದಲ್ಲಿ ನೀವು ಕುಳಿತು ನಿಮ್ಮ ಕೈಗಳನ್ನು ಮುಂದೆ ತಂದು ಬೆರಳುಗಳ ಚಲನೆ ಮಾಡಿ.
- ಚಲನೆಯ ಜೊತೆಗೆ, ಚಪ್ಪಾಳೆ, ಚಿಟಿಕೆ, ಕೈಗಳ ಚಲನೆಯನ್ನು ಮಾಡಿ.
- ಹಲವು ಭಾರಿ ಬೆರಳುಗಳ ಚಲನೆ ಮಾಡುತ್ತಾ ಮಕ್ಕಳಿಗೂ ಅನುಕರಿಸಲು ಹೇಳುವುದು. ಈ ಮೂಲಕ ಬೆರಳುಗಳು ಗಟ್ಟಿಯಾಗುತ್ತದೆ. ಬೆರಳುಗಳನ್ನು ಹೀಗೆ ಉಪಯೋಗಿಸಬಹುದೆಂದು ಹೇಳಬಹುದು.

# ಚಟುವಟಿಕೆ 8: ಹಿಟ್ಟಿನಿಂದ ಆಕಾರ ಮೂಡಿಸುವುದು.



**ಬೇಕಾದ ವಸ್ತುಗಳು –**
ಗೋಧಿಹಿಟ್ಟು, ಉಪ್ಪು, ನೀರು ಮತ್ತು ಹರಿಶಿನ .
2 ಭಾಗ ಗೋಧಿಹಿಟ್ಟು 1 ಭಾಗ ಉಪ್ಪು, 1 ಭಾಗ ನೀರು,
1 ಚಮಚ ಎಣ್ಣೆ, ಹರಿಶಿನ ಹಾಕಿ ಮೃದುವಾಗಿ ಹಿಟ್ಟನ್ನು ಕಲಿಸಿ.




## ವಿಧಾನ

- ಎಲ್ಲ ಮಕ್ಕಳಿಗೂ ಕಲಸಿದ ಹಿಟ್ಟನ್ನು ನೀಡುವುದು.
- ಹಿಟ್ಟಿನಿಂದ ಮಾಡಬಹುದಾದ ತಟ್ಟೆ ಬಟ್ಟಲು, ಪ್ರಾಣಿ ಮುಂತಾದವುಗಳನ್ನು ಮಾಡಿ ತೋರಿಸುವುದು.
- ಮಕ್ಕಳಿಗೂ ಅಂತಹ ಹಿಟ್ಟಿನಿಂದ ವಿವಿಧ ಆಕಾರಗಳನ್ನು ಮಾಡಲು ಹೇಳುವುದು.
- ಕೊನೆಗೆ ಮಕ್ಕಳು ವಿವಿಧ ರೀತಿಯ ಆಕಾರಗಳನ್ನು ಮಾಡಿ ಅವುಗಳು ಏನೆಂದು ಗುರುತಿಸಲು ಹೇಳುವುದು.



# ಚಟುವಟಿಕೆ 9: ಚಿತ್ರಬಿಡಿಸುವುದು ಮತ್ತು ಬಣ್ಣ ಬಳಿಯುವುದು.

**ಬೇಕಾದ ವಸ್ತುಗಳು–**
ನ್ಯೂಸ್ ಪೇಪರ್ ಮತ್ತು ಬಣ್ಣ ವೃತ್ತ / ಚೌಕ / ತ್ರಿಭುಜ ಕತ್ತರಿಸಿದ ಹಾಳೆಗಳು





ವಿಧಾನ

- ಎಲ್ಲ ಮಕ್ಕಳಿಗೆ ಬಿಳಿ ಹಾಳೆ/ನ್ಯೂಸ್ ಪೇಪರ್ ನೀಡುವುದು.
- ಒಂದು ಬಣ್ಣವನ್ನು ಆರಿಸಿಕೊಂಡು ವೃತ್ತ / ಚೌಕ / ತ್ರಿಭುಜ ಹೀಗೆ ಬರೆಯುವುದು (ಉದಾಹರಣೆ: ನಾನು ಚೌಕವನ್ನು ಕೆಂಪು ಬಣ್ಣದಲ್ಲಿ ಬಿಡಿಸುತ್ತೇನೆ ಈಗ ನೀವು ಒಂದನ್ನು ಸಿದ್ಧಪಡಿಸಿ)
- ಮಕ್ಕಳಿಗೆ ಇಷ್ಟವಾದ ಬಣ್ಣದಲ್ಲಿ ಬೇಕಾದ ಆಕಾರವನ್ನು ಬಿಡಿಸಲು ಹೇಳುವುದು.
- ಬಣ್ಣ ಬಿಡಿಸಿದ ಮೇಲೆ ಆ ಹಾಳೆಯನ್ನು ಎತ್ತಿ ಹಿಡಿದು ತಾವು ಬರೆದ ಆಕಾರ ಬಳಸಿದ ಬಣ್ಣವನ್ನು ಹೇಳಲು ಹೇಳುವುದು.
- ನ್ಯೂಸ್ ಪೇಪರ್‌ನ್ನು ವಿವಿಧ ಆಕಾರಗಳನ್ನು ಮಕ್ಕಳಿಗೆ ನೀಡಿ ಬಣ್ಣ ಆಕಾರಗಳನ್ನು ಗುರುತಿಸಲು ಹೇಳುವುದು.
- ಜೊತೆಗೆ ಮಕ್ಕಳಿಗೆ ಚಿತ್ರಕಲೆ, ವರ್ಣಚಿತ್ರಗಳನ್ನು ಬಿಡಿಸಲು ಹೇಳುವುದು

# ಚಟುವಟಿಕೆ 10: ನೀರಿನಾಟ

**ಬೇಕಾದ ವಸ್ತುಗಳು–**
ಕಪ್‌ಗಳು, ಲೋಟಗಳು ಮತ್ತು ನೀರು





## ವಿಧಾನ

- ಮಕ್ಕಳಿಗೆ ಎರಡರಿಂದ ಮೂರು ನೀರು ತುಂಬಿದ ಲೋಟಗಳನ್ನು ನೀಡಬೇಕು.
- ಮಕ್ಕಳಿಗೆ ನೀರನ್ನು ಬಳಸಿ ಆಟವನ್ನು ಆಡೋಣವೆಂದು ಹೇಳಿ ಒಂದರಿಂದ ಮತ್ತೊಂದು ಲೋಟಕ್ಕೆ ನೀರು ಸುರಿವುದೆಂದು ಹೇಳುವುದು.
- ಮಕ್ಕಳಿಗೆ ನಿಧಾನವಾಗಿ ಒಂದು ಲೋಟದಿಂದ ಮತ್ತೊಂದು ಲೋಟಕ್ಕೆ ನೀರು ಸುರಿಯಲು ಹೇಳುವುದು.
- ನೀರನ್ನು ನಿಧಾನವಾಗಿ ಒಂದು ಲೋಟದಿಂದ ಮತ್ತೊಂದು ಲೋಟಕ್ಕೆ ಸುರಿಯಲು ಹೇಳುವುದು. ಆಟ ಆರಂಭಿಸಿದಾಗ ಲೋಟದಲ್ಲಿ ಇದ್ದ ನೀರನ್ನು ಹಾಗೆ ಜಾಗರೂಕತೆಯಿಂದ ಉಳಿಸುವುದು.
- ನೀರನ್ನು ಚೆಲ್ಲದೆ ಜಾಗರೂಕವಾಗಿ ಹೇಗೆ ಲೋಟದಿಂದ ಸುರಿಯಬೇಕೆಂದು ಮಕ್ಕಳಿಗೆ ಹೇಳುವುದು.
- ಅಗಲವಾದ ಲೋಟದಲ್ಲಿ ನೀರು ಸುರಿದಾಗ ನೀರು ಅಗಲವಾಗಿ ಆಗುತ್ತದೆ, ಉದ್ದದ ಲೋಟದಲ್ಲಿ ನೀರು ಸುರಿದಾಗ ಉದ್ದವಾಗಿಯೇ ಆಕಾರ ಪಡೆಯುತ್ತದೆ. ಆಕಾರಕ್ಕೆ ತಕ್ಕಂತೆ ನೀರಿನ ಪ್ರಮಾಣ ಭಿನ್ನವೂ ಆಣುತ್ತದೆ.
- ನೀರನ್ನು ಸುರಿಯುವಾಗ ಮಕ್ಕಳನ್ನು ಉತ್ತೇಜಿಸುವುದು. ಬದಲಿ (ನೀರನ್ನು ಚೆಲ್ಲಿದಾಗ ಮಕ್ಕಳ ಬಳಿ ಕಠಿಣವಾಗಿ ವರ್ತಿಸಬಾರದು).
- ನೆಲಕ್ಕೆ ಚೆಲ್ಲಿದ ನೀರನ್ನು ಒರೆಸಲು ಮಕ್ಕಳ ಸಹಾಯವನ್ನು ಪಡೆಯಿರಿ.

# ಚಟುವಟಿಕೆ 11: ಮಡಿಚಿ ಮತ್ತು ಹರಿಯಿರಿ

**ಬೇಕಾದ ವಸ್ತುಗಳು–**
ಹಳೆಯ ಹಾಳೆಗಳು ಮತ್ತು ವೃತ್ತ ಪತ್ರಿಕೆಗಳು







## ವಿಧಾನ

- ಮಕ್ಕಳಿಗೆಲ್ಲಾ ಹಾಳೆಯನ್ನು ಕೊಡುವುದು.
- ನೀವು ಒಂದು ಹಾಳೆಯನ್ನು ತೆಗೆದುಕೊಂಡು ನೀವು ಮಡಿಚಿದಂತೆ ಹಾಳೆಯನ್ನು ಮಡಿಸಲು ಹೇಳುವುದು.
- ಅರ್ಧಕ್ಕೆ ಸರಿಯಾಗಿ ತುದಿ ಸೇರುವಂತೆ ಹಾಳೆಯನ್ನು ಮಡಿಚುವುದು.
- ಮಡಿಕೆಯ ಮೇಲೆ ಹೆಬ್ಬೆರಳಿಟ್ಟು ಒತ್ತಿ ಹೇಳುವುದು.
- ನಂತರ ಮಡಿಕೆಯ ಜಾಗವನ್ನು ಮಧ್ಯಭಾಗಕ್ಕೆ ಹರಿಯಲು ಹೇಳುವುದು.
- ಈ ಆಟದ ಫಲಿತಾಂಶ ಎರಡು ಸಮಭಾಗವಾಗಿ ಕತ್ತರಿಸಿದ ಹಾಳೆಗಳು ಚಟುವಟಿಕೆಯನ್ನು ಮುಂದುವರೆಸಲೂಬಹುದು.

* ಜೊತೆಗೆ ಹಾಳೆಯಿಂದ ಬೋಟು / ವಿಮಾನಗಳನ್ನು ಮಾಡಬಹುದು.






# ಭಾಷೆ ಮತ್ತು ಮಾತಿನ ಬೆಳವಣಿಗೆ

| ಕೌಶಲ್ಯ ಮತ್ತು ಸಾಮರ್ಥ್ಯ | ಚಟುವಟಿಕೆಗಳು ಮತ್ತು ಅವಕಾಶಗಳು |
|---|---|
| ಮಾತಿನಲ್ಲಿ ಸ್ಪಷ್ಟತೆ → | ಬಾಯಿಯ ಸ್ನಾಯುಗಳ ವ್ಯಾಯಮ |
| ಪದಬಳಕೆಯ ಹೆಚ್ಚಳ → | ಆಟಗಳ ಹೆಸರು ಹೇಳುವುದು |
| ಚಿಕ್ಕ ವಾಕ್ಯಗಳ ರಚನಾ ಸಾಮರ್ಥ್ಯ →<br>ಅಗತ್ಯಗಳನ್ನು ವ್ಯಕ್ತಪಡಿಸುವುದು →<br>ವರ್ಣಿಸುವ ಸಾಮರ್ಥ್ಯ → | ಕತೆ ಹೇಳುವುದು<br>ಫೋನ್ ಆಟ<br>ಆಟವನ್ನು ವಿವರಿಸುವುದು (ಚಿತ್ರಗಳನ್ನು / ಘಟನೆಗಳನ್ನು ತೋರಿಸುವುದು) |

# ಚಟುವಟಿಕೆ 12 : ಬಾಯಿಯ ಸ್ನಾಯುಗಳಿಗೆ ವ್ಯಾಯಾಮ



**ಬೇಕಾದ ವಸ್ತುಗಳು–**
ಸ್ಟ್ರಾ, ವಿಷಲ್, ಕೊಳಲು

## ವಿಧಾನ

- ಸ್ಟ್ರಾ, ವಿಷಲ್, ಕೊಳಲನ್ನು ಊದಲು ನೀಡುವುದು.
- ದೀರ್ಘವಾಗಿ ಹಾಗೂ ಅಲ್ಪಾವಧಿಯಲ್ಲಿ ಊದಲು ಹೇಳುವುದು.



# ಚಟುವಟಿಕೆ 13: ಆಟಗಳನ್ನು ಹೆಸರಿಸುವಿಕೆ ಮತ್ತು ಗುರುತಿಸುವಿಕೆ

**ಬೇಕಾದ ವಸ್ತುಗಳು:**
**ಚಿತ್ರ ನಕ್ಷೆಗಳು /ಹಣ್ಣು, ತರಕಾರಿ ದಿನನಿತ್ಯ ಬಳಸುವ ವಸ್ತುಗಳು, ಪ್ರಾಣಿಗಳು, ಹೂವು ಇತ್ಯಾದಿ**




## ವಿಧಾನ

**ಹೆಸರಿಸುವಿಕೆ (೧)**

- ಕಾರ್ಡ್ ಅಥವ ವಸ್ತುಗಳನ್ನು ತೋರಿಸಿ.
- ಇದು ಯಾವ ವಸ್ತು /ನಕ್ಷೆ ಎಂದು ಮಕ್ಕಳಿಂದ ತಿಳಿಯಿರಿ.
  ಗುರುತಿಸುವಿಕೆ (೧೧)
- ಆಟಕ್ಕೆ ಉಪಯೋಗಿಸುವ ಎಲ್ಲಾ ವಸ್ತುಗಳನ್ನು ಜೋಡಿಸಿ.
  ವಸ್ತುವಿನ ಹೆಸರನ್ನು ನೀವು ಹೇಳಿ ವಸ್ತುವನ್ನು ಮಗು ಗುರುತಿಸಲಿ. ಉದಾ:ಹಣ್ಣು ಎಲ್ಲಿದೆ? ಫ್ಯಾನ್ ಯಾವುದು?











## ಚಟುವಟಿಕೆ 14: ಕತೆ ಹೇಳುವುದು

2

**ಬೇಕಾದ ವಸ್ತುಗಳು–**
ಕಥೆಗಳ ನಕ್ಷೆ / ಕಥೆಗಳೊಳಗೊಂಡ ಚಿತ್ರಗಳು

### ವಿಧಾನ

- ಮಕ್ಕಳೆಲ್ಲರಿಗೆ ಕಾಣುವಂತೆ ಕಥೆಗಳ ನಕ್ಷೆಯನ್ನು ಹಾಕುವುದು.
- ನಕ್ಷೆ / ಚಿತ್ರಗಳಲ್ಲಿ ಕಾಣುವ ಪ್ರಾಣಿಗಳ / ವಿಷಯಗಳ ಕುರಿತು ಕೆಲವು ಪ್ರಶ್ನೆ ಕೇಳುವುದು.
- ಕಥನವನ್ನು ತೋರಿಸುತ್ತಾ ಕಥೆಯನ್ನು ವಿವರಿಸುವುದು.
- ಕೊನೆಯಲ್ಲಿ ಮಕ್ಕಳು ಕಥೆಯ ಬಗ್ಗೆ ತಿಳಿದುಕೊಂಡಿರುವುದೇನು ಎಂದು ಪ್ರಶ್ನೆ ಕೇಳುವುದರ ಮೂಲಕ ಕಥೆಯ ಅರ್ಥವಾಗಿದೆಯೇ ಎಂದು ತಿಳಿಯುವುದು (ಉದಾಹರಣೆ: ಕಾಗೆ ಏಕೆ ನೀರು ಕುಡಿಯಲು ಹೋಯಿತು? ನೀರು ಎಲ್ಲಿ ಸಿಕ್ಕಿತು?
- ಕಥೆಯನ್ನು ಕುರಿತು ಮಕ್ಕಳ ಅಭಿಪ್ರಾಯವನ್ನು ತಿಳಿಯಿರಿ. ಅವರ ಅಭಿಪ್ರಾಯವನ್ನು ತಿಳಿಯಿರಿ.



# ಚಟುವಟಿಕೆ 15: ಫೋನಿನ ಆಟ



**ಬೇಕಾದ ವಸ್ತುಗಳು–**
ಪೇಪರ್ ಕಪ್ ಮತ್ತು ದಾರ

ಫೋನ್ ತಯಾರು ಮಾಡುವುದು  ಎರಡು ಪೇಪರ್ ಕಪ್‌ಗಳನ್ನು ತೆಗೆದುಕೊಂಡು ತಳಭಾಗದಲ್ಲಿ ಚುಚ್ಚಿ ದಾರಗಳನ್ನು ಹಾಕಿ ಕಟ್ಟಿರಿ. ಅದರಿಂದ ಎರಡು ಕಪ್‌ಗಳ ಜೋಡಣೆಯಾಗುತ್ತದೆ. ಕಪ್‌ನ ಒಳಭಾಗಕ್ಕೆ ಗಂಟುಗಳನ್ನು ಹಾಕಿ. (ದಾರದ ಉದ್ದ 4–5 ಅಡಿ ಇರಲಿ ಇಬ್ಬರು ಮಕ್ಕಳನ್ನು ಸ್ವಲ್ಪ ದೂರದಲ್ಲಿ ಮಾತನಾಡಲು ಬಿಡಿ)



## ವಿಧಾನ

- ಇಬ್ಬರು ಮಕ್ಕಳಿಗೆ ಒಂದು ಫೋನ್‌ನ್ನು ನೀಡಿ ದೂರದಲ್ಲಿ ಕುಳ್ಳಿರಿಸಿ. ಎಲ್ಲ ಮಕ್ಕಳ ಕೈಲೂ ಒಂದು ಕಪ್ ನೀಡಿ.
- ಹೊಸ ಟೆಲಿಫೋನಿನಲ್ಲಿ ಸ್ನೇಹಿತರೊಡನೆ ಮಾತನಾಡಲು ಹೇಳಿ.
- ಸ್ನೇಹಿತರೊಡನೆ ಮಾತನಾಡಲು ಉತ್ತೇಜಿಸಿ. ಸ್ನೇಹಿತರನ್ನು ಅಭಿನಂದಿಸಿ. ಪ್ರಶ್ನೆಗಳನ್ನು ಕೇಳಲು ಹೇಳಿ. ಕುಟುಂಬ, ಶಾಲೆ, ತಿಂದ ತಿನಿಸಿನ ಬಗ್ಗೆ ಮಾತನಾಡಲು ಉತ್ತೇಜಿಸಿ.





# ಚಟುವಟಿಕೆ 16: ಮುಖವಾಡ ಮತ್ತು ಗೊಂಬೆಯಾಟ

**ಬೇಕಾದ ವಸ್ತುಗಳು–**

ಬೆರಳಿನ ಮೇಲೆ ಗೊಂಬೆಯ ಚಿತ್ರ – ಪೆನ್ ಉಪಯೋಗಿಸಿ ಬೆರಳುಗಳ ಮೇಲೆ ಬೊಂಬೆಯ ಚಿತ್ರ ಬಿಡಿಸಲು ಹೇಳುವುದು.

ಮುಖವಾಡ – ಪೇಪರ್ ಪ್ಲೇಟ್ ಉಪಯೋಗಿಸುವುದು. ಬಣ್ಣ ಬಣ್ಣದ ಮುಖವಾಡವನ್ನು ಮಕ್ಕಳೊಂದಿಗೆ ಸೇರಿ ತಯಾರಿಸುವುದು.

**ವಿಧಾನ**

- ಮಕ್ಕಳನ್ನು ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ಹೇಳುವುದು.
- ತಮಗೆ ತಿಳಿದಿರುವ ಯಾವುದಾದರೂ ಗೊಂಬೆ, ಮುಖವಾಡಗಳಂತೆ ನಟಿಸಲು ಹೇಳುವುದು.
- ಆ ಗೊಂಬೆ / ಮುಖವಾಡಗಳ ಪರಿಚಯ ತಿಳಿಸುತ್ತಾ ಮಕ್ಕಳು ಕತೆ ಹೇಳಲೂಬಹುದು. (ಅವುಗಳು ಎಲ್ಲಿ ವಾಸ ಮಾಡುತ್ತವೆ, ಅವು ಏನು ಮಾಡುತ್ತವೆ, ಅವು ಎಲ್ಲಿಗೆ ಹೋದವು, ಅವುಗಳಿಗೆ ಏನು ಇಷ್ಟ)





# ಚಟುವಟಿಕೆ 17: ವಿಭಿನ್ನ ಶಿಶುಗೀತೆಗಳು

ಬೇಕಾದ ವಸ್ತುಗಳು

–





## ವಿಧಾನ

- ಹಳೆಯ ಪ್ರಸಿದ್ಧ ಶಿಶುಗೀತೆಗಳ ಪದ, ಸಂದರ್ಭವನ್ನು ಬದಲಾಯಿಸಿ ಹೇಳಿಕೊಡುವುದು.
  ಉದಾಹರಣೆ : 1. ಜಣ ಜಣ ಜಣ ಜೇಬು ತುಂಬ ಹಣ
  ಬದಲಿಗೆ
  ಚಿಟ ಪಟ ಚಿಟ ಮಳೆ ಬಂತು ಪಟ
  ಉದಾಹರಣೆ : 2.ಮೇರಿ ಹ್ಯಾಂಡ್ ಎ ಲಿಟ್ಟಲ್ ಲ್ಯಾಂಬ್ (ರಾಮು ಹ್ಯಾಡ್ ಎ ಲಿಟ್ಟಲ್ ಲ್ಯಾಂಬ್)
- ಮೊದಲಿಗೆ ಮೂಲ ಶಿಶುಗೀತೆಗಳನ್ನು ಹಾಡಿ ನಂತರ ಬದಲಿಸಿದ ಗೀತೆ ಹಾಡುವುದು.
- ಮಕ್ಕಳಿಗೆ ಸಾಲುಗಳನ್ನು ಬದಲಿಸಿ ಹಾಡಲು ಹೇಳುವುದು.






# ಸಾಮಾಜಿಕ ಬೆಳವಣಿಗೆ

| ಸಾಮರ್ಥ್ಯ ಮತ್ತು ಕೌಶಲ್ಯ | ಚಟುವಟಿಕೆಗಳು ಮತ್ತು ಅವಕಾಶಗಳು |
|---|---|
| ಪರಿಚಿತವಿರುವ ವ್ಯಕ್ತಿಗಳನ್ನು ಗುರುತಿಸುವುದು | ಪರಿಚತವಿರುವ ವ್ಯಕ್ತಿಗಳ ಗುರುತಿಸುವುದು ಹೆಸರಿಸುವುದು. |
| ಇರುವ ಸ್ಥಳಗಳನ್ನು ಅರಿಯುವುದು. (ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಗುರುತಿಸುವುದು) | ಇರುವ ಸ್ಥಳವನ್ನು ಗುರುತಿಸುವುದು. (ಮಕ್ಕಳು ಓಡಾಡುವ ಸ್ಥಳ) ಅಲ್ಲಿ ನಡೆದಿರುವ ಘಟನೆಗಳನ್ನು ಗುರುತಿಸುವುದು. |
| ದಿನಚರಿಯನ್ನು ಮತ್ತು ಸಂದರ್ಭ ವನ್ನು ಅರ್ಥ ಮಾಡಿಕೊಳ್ಳುವುದು. | ದಿನನಿತ್ಯದ ಚಟುವಟಿಕೆಯನ್ನು ಚಿತ್ರಗಳ ಮೂಲಕ ಗಉರುತಿಸುವುದು. |
| ಆಟದ ನಿಯಮಗಳನ್ನು ಅರಿಯುವುದು. | ಸರಳ ಆಟದ ನಿಯಮಗಳು. |
| ಸಮಾನರೊಂದಿಗೆ ಚರ್ಚೆ | ಸಮಾನರೊಂದಿಗೆ ನಡೆಸುವ ಚರ್ಚೆಗಳನ್ನು ವೀಕ್ಷಿಸುವುದು, ಗುಂಪು ಆಟ ಪರಸ್ಪರ ಸಹಕಾರದೊಂದಿಗೆ ಆಟ. |

# ಸಾಮಾಜಿಕ ಬೆಳವಣಿಗೆಗಾಗಿ ಚಟುವಟಿಕೆಗಳು


## ಚಟುವಟಿಕೆ 18: ತಿಳಿದಿರುವ ಸ್ಥಳಗಳು



**ಬೇಕಾದ ವಸ್ತುಗಳು–**
ಸಾರ್ವಜನಿಕ ಸ್ಥಳಗಳ ಚಿತ್ರಗಳು ಉದಾಹರಣೆಗೆ ಅಂಗಡಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಮಾರುಕಟ್ಟೆ, ಹಳ್ಳಿಗಳು, ಆಸ್ಪತ್ರೆ


### ವಿಧಾನ

- ಮಕ್ಕಳಿಗೆ ಕಾಣುವಂತೆ ಚಿತ್ರವನ್ನು ಹಿಡಿಯುವುದು.
- ಈ ಸ್ಥಳ ಯಾವುದೆಂದು ಗುರುತಿಸಲು ಹೇಳುವುದು.
- ಸ್ಥಳದ ಹೆಸರು ಯಾವುದು?
- ನಡೆಯುವ ಘಟನೆ ಏನು?
- ಅಲ್ಲಿ ಸಿಗುವುದೇನು ಎಂದು ಗುರುತಿಸುವುದು.
- ನೀವು ಈ ಸ್ಥಳಕ್ಕೆ ತೆರಳಿದ್ದೀರಾ ಯಾರ ಜೊತೆ ? ಯಾವಾಗ ? ಎಂದು ಪ್ರಶ್ನಿಸುವುದು.







# ಚಟುವಟಿಕೆ 19: ತಿಳಿದಿರುವ ವ್ಯಕ್ತಿಗಳು



**ಬೇಕಾದ ವಸ್ತುಗಳು–**
ಕುಟುಂಬದವರ ಚಿತ್ರಗಳು / ಕುಟುಂಬ ನಕ್ಷೆ

## ವಿಧಾನ

- ➢ ಕುಟುಂಬ ನಕ್ಷೆಯನ್ನು ಎತ್ತಿ ಹಿಡಿದು ಎಲ್ಲ ಮಕ್ಕಳಿಗೂ ಕಾಣುವ ಹಾಗೆ ತೋರಿಸುವುದು.
- ➢ ಮಕ್ಕಳನ್ನು ಪ್ರಶ್ನಿಸುವುದು.
- – ಇದು ಯಾರು? (ಸಂಬಂಧಗಳ ಬಗ್ಗೆಯೂ ಮಕ್ಕಳಿಂದ ಮಾಹಿತಿ ಪಡೆಯುವುದು. ಅಪ್ಪ, ಅಮ್ಮ, ಅಕ್ಕ, ತಂಗಿ).
- – ಇವರು ಏನು ಕೆಲಸ ಮಾಡುತ್ತಾರೆ ಮನೆಯಲ್ಲಿ ಎಂದು ಪ್ರಶ್ನಿಸಿ ಮಾಹಿತಿ ಪಡೆಯುವುದು.
- – ನೀವು ನಿಮ್ಮ ಕುಟುಂಬದವರೊಂದಿಗೆ ಯಾವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತೀರಾ?
- – ಹಿರಿಯರು, ಕಿರಿಯರು ಎಲ್ಲರ ಬಗ್ಗೆ ಮಾಹಿತಿ ಪಡೆಯುವುದು.

**ಸೂಚನೆ:** ಕುಟುಂಬದ ಹಿನ್ನೆಲೆಯನ್ನು ಆಧರಿಸಿ, ಮನೆಯಲ್ಲಿರುವ ವ್ಯಕ್ತಿಗಳು ಯಾರೆಂಬುದನ್ನು ತಿಳಿದು ಸಂದರ್ಭೋಚಿತವಾಗಿ ವರ್ತಿಸಿ.











# ಚಟುವಟಿಕೆ 20: ದಿನಚರಿ

**ಬೇಕಾದ ವಸ್ತುಗಳು–**
ದಿನನಿತ್ಯ ಅಗತ್ಯ ವಸ್ತುಗಳ ಚಿತ್ರಣ (ಸ್ನಾನ, ತಿಂಡಿ, ಅಂಗನವಾಡಿಗೆ ಹೋಗುವುದು)






## ವಿಧಾನ

- ವಸ್ತು ಚಿತ್ರಣವನ್ನು ಎತ್ತಿಹಿಡಿದು ಅದರ ಚಟುವಟಿಕೆಯನ್ನು ಗುರುತಿಸಿ ಹೇಳುವುದು.
- ಚಿತ್ರದಲ್ಲಿರುವ ಎಲ್ಲಾ ಚಟುವಟಿಕೆಯನ್ನು ಗುರುತು ಹಿಡಿದ ಮೇಲೆ ಬೆಳಗಿನ ದಿನಚರಿಯ ಅನುಕ್ರಮವನ್ನು ಮಗುವಿನಿಂದ ತಿಳಿಯುವುದು. ಬೆಳಗಿನಿಂದ ರಾತ್ರಿಯವರೆಗೂ ಮಗುವಿನ ಎಲ್ಲಾ ಚಟುವಟಿಕೆಗಳನ್ನು ಗುರುತಿಸುವುದು.
- ಕೊನೆಯಲ್ಲಿ ದಿನಚರಿಯನ್ನು ಮತ್ತೊಮ್ಮೆ ತಿಳಿಹೇಳಿ. ದಿನದಲ್ಲಿ ಆ ಕೆಲಸದ ಬಗ್ಗೆ ಮಹತ್ವವನ್ನು ತಿಳಿಸುವುದು. (ದಿನಚರಿ ಸರಿಯಾದ ಸಮಯಕ್ಕೆ ಮುಗಿಸದಿದ್ದರೆ ಶಾಲೆ / ಅಂಗನವಾಡಿಗೆ ಬರುವ ಹೊತ್ತಿಗೆ ಆಯಾಸವಾಗುತ್ತದೆ ಎಂದು ತಿಳಿಸುವುದು)

# ಚಟುವಟಿಕೆ 21: ಗುಂಪಿನ ಆಟ

**ಬೇಕಾದ ವಸ್ತುಗಳು–**
ಸರಳ ವಸ್ತುಗಳು (ಉದಾ: ಮಣಿ, ಬಣ್ಣದ ಪೆನ್ಸಿಲ್) ಎಷ್ಟು ಮಕ್ಕಳಿರುತ್ತಾರೋ ಅಷ್ಟು ವಸ್ತುಗಳು.



## ವಿಧಾನ

- ಒಂದು ಕೋಣೆಯ ಬದಿಯಲ್ಲಿ ಸೀಮೆಸುಣ್ಣದಿಂದ ವೃತ್ತ ಅಥವಾ ಚೌಕ ಹಾಕುವುದು.
- ಮಕ್ಕಳ ಎರಡು ತಂಡವನ್ನು ರಚಿಸುವುದು.
- ಎರಡು ಸಾಲಾಗಿ ಮಕ್ಕಳಿಗೆ ಒಬ್ಬರ ಹಿಂದೆ ಒಬ್ಬರು ಸಮ ಅಂತರದಲ್ಲಿ ನಿಲ್ಲಲು ಹೇಳುವುದು.
- ಮಕ್ಕಳಿಗೆ ಆಟದ ವಿವರ : 'ಆಟ ಆರಂಭಿಸಿ 1, 2, 3 ಎನ್ನುವದರೊಳಗೆ ಗುಂಪಿನ ವ್ಯಕ್ತಿಗಳು ಒಬ್ಬೊಬ್ಬರು ತಮ್ಮ ಕೈಯಲ್ಲಿರುವ ವಸ್ತುವನ್ನು ಚೌಕ / ವೃತ್ತದಲ್ಲಿಟ್ಟು ಬರಬೇಕು. ಯಾವ ಗುಂಪಿನವರು ಮೊದಲು ಮುಗಿಸುತ್ತಾರೋ ಅವರು ಗೆಲ್ಲುತ್ತಾರೆ.
- ಈಗ ಆಟ ಆರಂಭಿಸಿ : ಗೆಲುವು ಸೋಲು ಮುಖ್ಯವಲ್ಲ, ಕ್ರಿಯೆ ಮುಖ್ಯ



# ಚಟುವಟಿಕೆ 22: ಅಭಿನಯದ ಆಟ

ಬೇಕಾದ ವಸ್ತುಗಳು–

–






## ವಿಧಾನ

- ದೋಸೆ ಅಂಗಡಿ' ತೆರೆದಂತೆ ಆಟ ಆಡುವ ಎಂದು ಹೇಳುವುದು.
- ಮಕ್ಕಳ ಆಯ್ಕೆಗೆ ಬಿಟ್ಟು ಯಾರು ಮಾಲೀಕರಾಗುವರು ಯಾರು ಗ್ರಾಹಕರು ಎಂದು ಕೇಳುವುದು.
- ವಿಭಿನ್ನ ರುಚಿಯ ದೋಸೆ ತಯಾರಿಸುವುದು.
- ಮಕ್ಕಳ ಕಲ್ಪನೆಗೆ ಆಟ ಮುಂದುವರೆಸಲು ಬಿಟ್ಟು ಚರ್ಚೆಗೆ ಸಂಭಾಷಣೆಗೆ ಅವಕಾಶ ಕಲ್ಪಿಸುವುದು. ತ






# ಬುದ್ಧಿಯ ಬೆಳವಣಿಗೆ

| ಸಾಮರ್ಥ್ಯ ಮತ್ತು ಕೌಶಲ್ಯ | ಚಟುವಟಿಕೆಗಳು ಮತ್ತು ಅವಕಾಶಗಳು |
|---|---|
| ಮಾಹಿತಿಯ ಬಗೆಗಿನ ಕುತೂಹಲ<br>- - - - - - - - - - - - - - -<br>ವಸ್ತುಗಳನ್ನು ಉಪಯೋಗಿಸುವ ಜ್ಞಾನ | ವಸ್ತುಗಳು (ಆಟಿಕೆ)ಉಪಯೋಗಿಸಿ ಆಟವಾಡುವುದು ಮತ್ತು ಮರುಜೋಡಿಸುವಿಕೆ. |
| ಗುಂಪು ಕಟ್ಟುವ ಸಾಮರ್ಥ್ಯ | ಬೇರ್ಪಡಿಸುವುದು, ವರ್ಗೀಕರಣ<br>ಪರಿಕಲ್ಪನೆ ಪುಸ್ತಕ / ಫ್ಲ್ಯಾಶ್ ಕಾರ್ಡ್ಸ್ |
| ಇರುವ ಸಾಮರ್ಥ್ಯವನ್ನು ಅನುಕ್ರಮವಾಗಿ ಉಪಯೋಗಿಸುವುದು. | ಕಥೆ ಹೇಳುವುದು (ಚರ್ಚೆಯ ಜೊತೆಗೆ) ಕಥೆ ಮುಕ್ತಾಯಗೊಳಿಸುವುದು.<br>ಚಿತ್ರಗಳನ್ನು ಅನುಕ್ರಮವಾಗಿ ಕಥೆ/ಘಟನೆಗಳನ್ನು ಜೋಡಿಸುವುದು. |
| ಆಕಾರ, ಗಾತ್ರ, ದೂರ, ದಿಕ್ಕಿನ ಪರಿಕಲ್ಪನೆಗಳ ಅರ್ಥೈಸುವಿಕೆ | ಒಗಟುಗಳು<br>ಬಣ್ಣ, ಆಕಾರ ಗುರುತಿಸುವಿಕೆ |
| ಗಮನ ಹೆಚ್ಚಿಸುವುದು | ಬಿಂದುಗಳನ್ನು ಸೇರಿಸುವುದು, ವ್ಯತ್ಯಾಸ ಗುರುತಿಸುವುದು ಚಟುವಟಿಕೆಯ ಸಂದರ್ಭದಲ್ಲಿ ಕಣ್ಣು ಮತ್ತು ಕೈಗಳ ಸಹಕಾರ. |

## ಚಟುವಟಿಕೆ 23: ಇದು ಏನು? ಹೇಗೆ ಉಪಯುಕ್ತ?



**ಬೇಕಾದ ವಸ್ತುಗಳು–**
ಮನೆಯಲ್ಲಿ ಉಪಯೋಗಿಸುವ ಹಣ್ಣು, ತರಕಾರಿಗಳ ಚಿತ್ರ, ಪ್ರಾಣಿಗಳು, ಪಕ್ಷಿಗಳು ಇನ್ನಿತರ ವಸ್ತುಗಳ ಚಿತ್ರಣ.

### ವಿಧಾನ

- ಒಂದು ಚಿತ್ರಣವನ್ನು ಮೇಲೆ ಎಲ್ಲ ಮಕ್ಕಳಿಗೆ ಕಾಣುವಂತೆ ತೋರಿಸುವುದು.
- ಮಕ್ಕಳನ್ನು ಪ್ರಶ್ನಿಸುವುದು.



– ಇದು ಏನು (ವಸ್ತು / ಪ್ರಾಣಿ)
– ಇದನ್ನು ಯಾವುದಕ್ಕೆ ಉಪಯೋಗಿಸುತ್ತೇವೆ.
– ಇದು ಎಲ್ಲಿ ಜೀವಿಸುತ್ತದೆ / ಏನು ತಿನ್ನುತ್ತದೆ / ಯಾವ ಶಬ್ಧ ಮಾಡುತ್ತದೆ (ಪ್ರಾಣಿಗಳಾದರೆ)
– ರುಚಿ ಎಂತದ್ದು ? ಅಡುಗೆ ಹೇಗೆ ಮಾಡುವುದು ಅಥವಾ ತಿನ್ನುವುದು ಹೇಗೆ ? ಆರೋಗ್ಯಕ್ಕೆ ಹಿತಕರವೇ ? (ತರಕಾರಿಯಾದರೆ)







# ಚಟುವಟಿಕೆ 24: ಗುಂಪಿಗೆ ಸೇರದ ಚಿತ್ರ

**ಬೇಕಾದ ವಸ್ತುಗಳು–**
ಪ್ರಾಣಿ, ಪಕ್ಷಿ, ತರಕಾರಿ, ಹಣ್ಣಿನ ಚಿತ್ರಣಗಳು



ವಿಧಾನ

- ಮೂರು ಚಿತ್ರಣಗಳು ಗುಂಪಿಗೆ ಸೇರುವ ಮತ್ತೊಂದು ಗುಂಪಿಗೆ ಸೇರದ ಚಿತ್ರವನ್ನು ಸಾಲಾಗಿ ಜೋಡಿಸುವುದು.
- ನಾಲ್ಕು ಚಿತ್ರವನ್ನು ಒಂದೇ ಸಾಲಿನಲ್ಲಿ ಜೋಡಿಸುವುದು. (ನೆಲದ ಮೇಲೆ ಮಕ್ಕಳಿಗೆ ಕಾಣುವಂತೆ ಇಡುವುದು)
- ಗುಂಪಿಗೆ ಸೇರದ್ದನು ಆಯ್ಕೆ ಮಾಡಲು ಮಕ್ಕಳಿಗೆ ಹೇಳುವುದು.
- ಹೀಗೆ ಬೇರೆ ಬೇರೆ ಗುಂಪಿನ ಚಿತ್ರಗಳನ್ನು ಜೋಡಿಸುವ ಮೂಲಕ ಮಕ್ಕಳಿಗೆ ಗುರುತಿಸುವ ಶಕ್ತಿ ಹೆಚ್ಚಾಗುತ್ತದೆ.






# ಚಟುವಟಿಕೆ 25: ವರ್ಗೀಕರಣ

**ಬೇಕಾದ ವಸ್ತುಗಳು–**
ಪ್ರಾಣಿ, ಪಕ್ಷಿ, ತರಕಾರಿ, ಹಣ್ಣುಗಳ ಚಿತ್ರ ಅಥವಾ ಆಟಿಕೆಗಳು

**ವಿಧಾನ**

- ಮೇಲೆ ತಿಳಿಸಿರುವ ಎಲ್ಲ ವಿಧದ ಚಿತ್ರದ ಕಾರ್ಡ್‌ಗಳನ್ನು ಮಿಶ್ರ ಮಾಡುವುದು.
- ಮಕ್ಕಳಿಗೆ ಸ್ಪಷ್ಟವಾಗಿ ಕಾಣುವಂತೆ ಮಿಶ್ರ ಮಾಡಿದ ಕಾರ್ಡ್‌ಗಳನ್ನು ಜೋಡಿಸುವುದು.
- ಮೂರು ವೃತ್ತಗಳನ್ನು ಬರೆಯುವುದು – ಒಂದು ಹಣ್ಣು, ತರಕಾರಿ ಮತ್ತೊಂದು ಪ್ರಾಣಿಗಾಗಿ.
- ಮಿಶ್ರ ಮಾಡಿರುವ ಚಿತ್ರದ ಕಾರ್ಡ್‌ಗಳಲ್ಲಿ ಹಣ್ಣಿನದನ್ನು ತೆಗೆದು ಹಣ್ಣಿನ ವೃತ್ತದಲ್ಲಿ ಇಡಲು ಹೇಳಿ.
- ನಂತರ ತರಕಾರಿಯ ಕಾರ್ಡ್‌ನ್ನು ವೃತ್ತದಲ್ಲಿ ಇಡಲು ಹೇಳಿ.
- ಹೀಗೆ ಪ್ರಾಣಿಗಳನನು ವಿಂಗಡಿಸಲಿ.
- ಆಟದ ಕೊನೆಯಲ್ಲಿ ಮೂರು ಗುಂಪುಗಳು ಸಿದ್ಧವಾಗುತ್ತದೆ. ಆ ಗುಂಪುಗಳು ಯಾವುದೆಂದು ಹೆಸರಿಸಲಿ.



# ಚಟುವಟಿಕೆ 26: ಜೋಡಣೆ

**ಬೇಕಾದ ವಸ್ತುಗಳು–**
ಎರಡು ಜೊತೆ ಚಿತ್ರದ ಕಾರ್ಡ್ – ಪ್ರಾಣಿ ಅಥವಾ ತರಕಾರಿ / ಹಣ್ಣು



## ವಿಧಾನ

- ಮಕ್ಕಳಿಗೆ ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ತಿಳಿಸಿ.
- ಎರಡು ಜೊತೆ ಕಾರ್ಡ್‌ಗಳನ್ನು ಮಿಶ್ರಮಾಡಿ.
- ಮಿಶ್ರಣದ ಕಾರ್ಡ್‌ಗಳನ್ನು ಹಾಗೆ ಮಕ್ಕಳಿಗೆ ಕಾಣುವಂತೆ ಜೋಡಿಸಿ.
- ಒಂದು ಕಾರ್ಡ್‌ನ್ನು ಆಯ್ಕೆ ಮಾಡಿ ಮಕ್ಕಳಿಗೆ ತೋರಿಸಿ ಅಂತದ್ದೇ ಒಂದು ಕಾರ್ಡ್‌ನ್ನು ಆಯ್ಕೆ ಮಾಡಲು ತಿಳಿಸಿ.
- ಈ ಚಟುವಟಿಕೆಯಲ್ಲಿ ಎಲ್ಲಾ ಮಕ್ಕಳು ಪಾಲಗೊಳ್ಳುವಂತೆ ಮಾಡಿ.

©DINTOONS!

# ಚಟುವಟಿಕೆ 27: ಗಮನ ಹೆಚ್ಚಿಸಲು

4



**ಬೇಕಾದ ವಸ್ತುಗಳು** : ಬಣ್ಣದ ಮಣಿಗಳು, ದಾರ
ಹಾಳೆಯಿಂದ ಮಣಿಗಳನ್ನು ತಯಾರು ಮಾಡಿ –
ಪೇಪರ್, ಗೋಂದು, ಬಣ್ಣದ ಸಹಾಯದಿಂದ!

1. ಒಂದು ದಪ್ಪ ಹಾಳೆ ತೆಗೆದುಕೊಳ್ಳಿ (2 ಪದರ)
2. ತ್ರಿಕೋನಾಕಾರವಾಗಿ ಉದ್ದವಾಗಿ ಪೇಪರ್ ಕತ್ತರಿಸಿ, ತ್ರಿಕೋನದ ಕೆಳಭಾಗ ಅಳತೆ ಮಣಿಯ ಮೂಲ ಆಗಬಹುದು.
3. ಅಗಲವಿರುವ ಭಾಗದಲ್ಲಿ ಪೆನ್ / ಕಡ್ಡಿಯ ಸಹಾಯದಿಂದ ಸರಿಯಾಗಿ ಮಡಿಚಿ.
4. ಸುರುಳಿ ಸುತ್ತಿದ ಹಾಳೆಯ ಕೊನೆ ಭಾಗಗಳಿಗೆ ಗೋಂದು ಹಾಕಿ.
5. ಕೊನೆಗೆ ಬಣ್ಣ ಬಳಿಯಿರಿ.
   ಈಗ ಮಣಿ ಸಿದ್ಧ.



## ವಿಧಾನ

- ಎಲ್ಲಾ ಮಕ್ಕಳಿಗೆ 10–15 ಮಣಿಗಳು ಮತ್ತು ದಾರವನ್ನು ನೀಡಿ.
- ಮಣಿಗಳನ್ನು ಪೋಣಿಸಲು ಹೇಳಿ.
- ಮಣಿಗಳ ಗಾತ್ರದಲ್ಲಿ ಬದಲಾವಣೆಯನ್ನು ಮಾಡಬಹುದು. (ಚಿಕ್ಕ ಮಣಿ ಪೋಣಿಸುವಾಗ ಹೆಚ್ಚು ಗಮನ ಬೇಕು)
- ಮಕ್ಕಳಿಗೆ ವಿವಿಧ ಬಗೆಯ ಮಣಿಗಳನ್ನು ನೀಡಿ ಬಣ್ಣ, ಅಳತೆ ಈ ವಿಧವಾಗಿ ವಿಂಗಡಿಸಲೂ ಹೇಳಬಹುದು.

**ಸೂಚನೆ:** ಬಣ್ಣದ ಮಣಿಗಳ ಮೂಲಕ ವರ್ಗೀಕರಣದ ಚಟುವಟಿಕೆಯನ್ನು ಉತ್ತೇಜಕವಾಗಿಸಬಹುದು.

4

# ಚಟುವಟಿಕೆ 28: ಸ್ಮರಣ ಶಕ್ತಿಯ ಆಟ

## ಬೇಕಾದ ವಸ್ತುಗಳು

– ಆಟದ ಚೀಲದಲ್ಲಿ ವಿಭಿನ್ನ ಆಟಿಕೆಗಳು
– ಎರಡು ಬಗೆಯ ಚಿತ್ರ ಕಾರ್ಡ್‌ಗಳು – ಪ್ರಾಣಿ ಅಥವಾ ತರಕಾರಿ, ಹಣ್ಣುಗಳು (ಸ್ಮರಣ ಶಕ್ತಿಯ ii, iiiನೇ ಆಟಕ್ಕೆ)



## ವಿಧಾನಸ್ಮರಣ ಶಕ್ತಿಯ ಆಟ (i)

- ಆಟಿಕೆ ಚೀಲದಿಂದ 6 ಭಿನ್ನ ಬಗೆಯ ಆಟಿಕೆಗಳನ್ನು ಆಯ್ಕೆ ಮಾಡಿ (ಉದಾಹರಣೆಗೆ: ಹಣ್ಣು, ತರಕಾರಿ, ಕಾರ್)
- ಮಕ್ಕಳಿಗೆ ಕಾಣುವಂತೆ ಜೋಡಿಸುವುದು.
- ಒಂದೊಂದು ಆಟಿಕೆಗಳನ್ನು ತೋರಿಸಿ ಅದರ ಹೆಸರುಗಳನ್ನು ಗುರುತಿಸುವುದು.
- ಈಗ ಆರು ಆಟಿಕೆಗಳನ್ನು ನೋಡಿದ್ದೇವೆ, ಈಗ ಅವುಗಳನ್ನು ನೋಡದೆ ಅವುಗಳನ್ನು ನೆನಪು ಮಾಡಿಕೊಳ್ಳಬೇಕು.
- ಮತ್ತೊಮ್ಮೆ ಆಟಿಕೆಗಳನ್ನು ತೋರಿಸುವುದು.
- ಈ ಆಟಿಕೆಗಳ ಮೇಲೆ ಬಟ್ಟೆ ಹೊದಿಸಿ ಅಥವಾ ಚೀಲಕ್ಕೆ ತುಂಬಿರಿ.
- ಈಗ ಆಟಿಕೆಗಳನ್ನು ನೋಡದೆ ಆ ಹೆಸರುಗಳನ್ನು ಹೇಳಲು ಬಿಡಿ.

## ಸ್ಮರಣ ಶಕ್ತಿಯ ಆಟ (ii)

- 6 ಭಿನ್ನ ಚಿತ್ರದ ಕಾರ್ಡ್‌ಗಳನ್ನು ಆಯ್ಕೆ ಮಾಡಿಕೊಳ್ಳಿ.
- ಕಾರ್ಡ್‌ಗಳನ್ನು ಸಾಲಾಗಿ ಜೋಡಿಸಿ.
- ಕಾರ್ಡ್‌ಗಳನ್ನು ಗಮನವಿಟ್ಟು ನೋಡಲು ತಿಳಿಸಿ.
- ಕಾರ್ಡ್‌ಗಳ ಕ್ರಮವನ್ನು ವ್ಯತ್ಯಾಸ ಮಾಡಿ.
- ಈಗ ಮೊದಲಿನಂತೆ ಕಾರ್ಡ್‌ಗಳನ್ನು ಜೋಡಿಸಲು ಹೇಳಿ.

Contd..

# ಚಟುವಟಿಕೆ 28: ಸ್ಮರಣ ಶಕ್ತಿಯ ಆಟ






## ಸ್ಮರಣ ಶಕ್ತಿಯ ಆಟ (iii)

- ಎರಡು ಸೆಟ್‌ಗಳ ಕಾರ್ಡ್‌ಗಳನ್ನು ಮಿಶ್ರಮಾಡಿ ಜೋಡಿಸಿ.
- ಸಾಲಿನಲ್ಲಿ ಚಿತ್ರ ಹಿಂಬದಿಗೆ ತಿರಿಗಿಸುವಂತೆ ಇಡಿ.
- ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ಎರೆಡೆರಡು ಕಾರ್ಡ್‌ಗಳನ್ನು ಹುಡುಕಲು ಹೇಳಿ.
- ಒಂದು ಕಾರ್ಡ್‌ನ್ನು ಆಯ್ಕೆ ಮಾಡಿಕೊಂಡ ನಂತರ ಅದನ್ನು ಹುಡುಕಬೇಕು.
- ಆ ಕಾರ್ಡ್ ಸಿಗದಿದ್ದಲ್ಲಿ ಮಗು ಕಾರ್ಡ್‌ಗಳನ್ನು ಮಗುಚಿ ಇಡಬೇಕು.
- ತಾವು ಆಯ್ಕೆ ಮಾಡಿಕೊಂಡಿರುವ ಕಾರ್ಡ್‌ಗಳನ್ನು ಸರಿಯಾಗಿ ಹುಡುಕಲು ಹೇಳಿ.
- ಮಕ್ಕಳು ಸರಿಯಾಗಿ ಆಯ್ಕೆ ಮಾಡಿದಲ್ಲಿ ಪ್ರೋತ್ಸಾಹಿಸಲು ಉಳಿದ ಮಕ್ಕಳಿಂದ ಚಪ್ಪಾಳೆ ಹೊಡೆಸಿ.
- ಎಲ್ಲಾ ಕಾರ್ಡ್ ಹುಡುಕುವ ತನಕ ಆಟ ಮುಂದುವರೆಸಿ.

**ಸೂಚನೆ** : ಕೊನೆಯ ಆಟ 4 ವರ್ಷದ ಮೇಲ್ಪಟ್ಟ ಮಕ್ಕಳಿಗಾಗಿ.







4

## ಚಟುವಟಿಕೆ 29: ಆಕಾರ, ಅಳತೆ, ಬಣ್ಣ ತಿಳಿಯಲು

**ಬೇಕಾದ ವಸ್ತುಗಳು** : ದಿನನಿತ್ಯ ಉಪಯೋಗಿಸುವ ವಸ್ತುಗಳ ಚಿತ್ರಗಳು ಅಥವಾ ಆಟಿಕೆಗಳು ಅಥವಾ ನಿತ್ಯೋಪಯೋಗಿ ವಸ್ತುಗಳಾದ ಲೋಟ, ತಟ್ಟೆ, ಚಮಚ ಇತ್ಯಾದಿ.





### ವಿಧಾನ

**ಆಕಾರ :**

- ಮಕ್ಕಳಿಗೆ ನಿಮ್ಮ ಬಳಿ ಆಟಕ್ಕೆಂದು ಇರುವ ವಸ್ತುಗಳನ್ನು ತೋರಿಸಿ.
- ಯಾವುದಾದರೂ ಚಿತ್ರ / ಆಟಿಕೆ ಹಿಡಿದು ಅದರಲ್ಲಿ ಇರುವ ಆಕಾರಗಳನ್ನು ತಿಳಿಸಿ. ಅದು ವೃತ್ತ, ಚೌಕ, ತ್ರಿಭುಜ. ಉದಾಹರಣೆ: ತಟ್ಟೆ, ಬಟ್ಟಲು ಮತ್ತು ಬಳೆಗಳು ವೃತ್ತಾಕಾರ. ಮನೆಯ ಕಿಟಕಿ, ಬಾಗಿಲುಗಳು ಚೌಕಾಕಾರ.
- ಹೀಗೆ ವಿವಿಧ ಬಗೆಯ ಚಿತ್ರ ತೋರಿಸಿ ಆಕಾರ ಗುರುತಿಸಲು ಹೇಳಿ.

**ಅಳತೆ:**


- ಹೀಗೆ ವಿವಿಧ ಅಳತೆಯಲ್ಲಿರುವ ವಸ್ತುಗಳನ್ನು ಮಕ್ಕಳಿಗೆ ತೋರಿಸಿ ಚಿಕ್ಕದು, ದೊಡ್ಡದು, ಉದ್ದ, ಗಿಡ್ಡ ಹೀಗೆ ಪರಿಚಯಿಸಿ.
- ಹೀಗೆ ಹಲವು ವಸ್ತು ಆಕೃತಿಗಳನ್ನು ತೋರಿಸಿ ದೊಡ್ಡದು, ಚಿಕ್ಕದು ಯಾವುದೆಂಬುದನ್ನು ಮಕ್ಕಳಿಂದ ತಿಳಿಯಲು ಪ್ರಯತ್ನಿಸಿ.
- ಜೊತೆಗೆ ಉದ್ದ / ಗಿಡ್ಡ ಈ ಪರಿಕಲ್ಪನೆಗಳನ್ನು ಮಕ್ಕಳಿಗೆ ತಿಳಿಸಿ (ಶಿಕ್ಷಕಿ ಉದ್ದ ಮತ್ತು ನೀನು ಗಿಡ್ಡ) ಅಥವಾ ಕುಟುಂಬ ನಕ್ಷೆ ತೋರಿಸಿ ಉದ್ದ ಗಿಡ್ಡ ಈ ಕುರಿತು ತಿಳುವಳಿಕೆ ನೀಡಿ.

**ಬಣ್ಣ:**

- ಮುಂದುವರೆಸಿ ಬೇರೆ ಬೇರೆ ವಸ್ತುಗಳನ್ನು ಮಕ್ಕಳಿಗೆ ತೋರಿಸಿ ಪ್ರಾಥಮಿಕ ಬಣ್ಣಗಳನ್ನು ಹೆಸರಿಸಿ (ಕೆಂಪು, ನೀಲಿ, ಹಸಿರು, ಹಳದಿ.. ಹೀಗೆ)
- ಬೇರೆ ಬೇರೆ ಚಿತ್ರಗಳು, ವಸ್ತುಗಳನ್ನು ತೋರಿಸಿ ಮಕ್ಕಳಿಗೆ ಬಣ್ಣ ಯಾವುದೆಂದು ಕೇಳಿ.
- ಈ ಬಣ್ಣವನ್ನು ನಿಮ್ಮ ಸುತ್ತಮುತ್ತಲು ಎಲ್ಲಾದರೂ ನೋಡಿರುವಿರೆಂದು ಕೇಳಿ ತಿಳಿಯಿರಿ. ಉದಾ: ಕೆಂಪು ಚೆಂಡನ್ನು ತೋರಿಸಿ ಮತ್ತೆ ಯಾರಾದರೂ  ಕೆಂಪು ಬಟ್ಟೆ ಧರಿಸಿರುವರೆ ಎಂದು ಪ್ರಶ್ನಿಸುವುದು?

# ಚಟುವಟಿಕೆ 30: ಅನುಕ್ರಮವಾಗಿ ಜೋಡಿಸಿ.

**ಬೇಕಾದ ವಸ್ತುಗಳು** : ದಿನ ನಿತ್ಯದ ಚಟುವಟಿಕೆಯ ಕುರಿತ ಕಾರ್ಡ್‌ಗಳು









## ವಿಧಾನ




- ಎಲ್ಲಾ ಕಾರ್ಡ್‌ಗಳನ್ನು ಮಿಶ್ರಮಾಡಿ ಮಕ್ಕಳಿಗೆ ಕಾಣುವಂತೆ ಜೋಡಿಸಿ.
- ಅನುಕ್ರಮವಾಗಿ ಮಕ್ಕಳಿಗೆ ಜೋಡಿಸಲು ಹೇಳಿ. ಬೆಳಿಗ್ಗೆ ಏಳುವುದು, ಹಲ್ಲು ಉಜ್ಜುವುದು, ಸ್ನಾನ ಮಾಡುವುದು ತಿಂಡಿ ತಿನ್ನುವುದು, ಶಾಲೆಗೆ ಹೋಗುವುದು..
- ಮುಂದುವರೆದು ಅವರ ನಿತ್ಯ ಚಟುವಟಿಕೆಗಳೇನು ಎಂಬುದನ್ನು ಚರ್ಚಿಸಲೂಬಹುದು. ಉದಾ: ಹಲ್ಲುಗಳನ್ನು ಉಜ್ಜಲು ಪೇಸ್ಟ್ ಮುಚ್ಚಲ ತೆರೆಯಬೇಕು, ಬ್ರಷ್‌ಗೆ ಪೇಸ್ಟ್ ಹಾಕಬೇಕು...









# 5. ಭಾವನಾತ್ಮಕ ಬೆಳವಣಿಗೆ

**ಸಾಮರ್ಥ್ಯ ಮತ್ತು ಕೌಶಲ**

ಹತ್ತಿರವಾಗುವಿಕೆ ಮತ್ತು ಸಂಬಂಧ

ಭಾವನೆಗಳನ್ನು ಗುರುತಿಸುವಿಕೆ

ಭಾವನೆಗಳ ನಿಯಂತ್ರಣಾ ಸಾಮರ್ಥ್ಯ

ಮತ್ತೊಬ್ಬ ವ್ಯಕ್ತಿಯ ಭಾವನೆಗೆ ಕಾರಣ ಅರಿಯುವುದು.

ಧನಾತ್ಮಕ / ಋಣಾತ್ಮಕ ಭಾವನೆಗಳ ಗುರುತಿಸುವಿಕೆ ಮತ್ತು ಭಿನ್ನತೆ

**ಚಟುವಟಿಕೆಗಳು ಮತ್ತು ಅವಕಾಶಗಳು**

ಸಮಯಕ್ಕೆ ಸರಿಯಾಗಿ ನೀಡುವ ಪ್ರೀತಿ ವಿಶ್ವಾಸಕ್ಕೆ ಮಗು ಸ್ಪಂದಿಸಬೇಕು ಮಾತಿನ ಮೂಲಕವೋ, ಆಂಗಿರವೋ ನಕಾರಾತ್ಮಕವಾಗಿ ವರ್ತಿಸಬೇಕು.

ಚಿತ್ರಗಳ ಮೂಲಕ ಭಾವನೆಗಳನ್ನು ಗುರುತಿಸುವುದು.

ಕಥೆ ಹೇಳುವುದು

ಕಥೆಯ ಪೂರ್ಣಗೊಳಿಸುವಿಕೆ.

ಕಣ್ಣಿಗೆ ಕಟ್ಟುವಂತ ಭಾವನೆಗಳು

ಭಾವನೆಗಳನ್ನು ಹಂಚಿಕೊಂಡಾಗ ಕೇಳುವುದು.


(ನೀವು ಸಂತೋಷದಲ್ಲಿದ್ದಾಗ)

## ಚಟುವಟಿಕೆ 31: ಭಾವನೆಗಳನ್ನು ಗುರುತಿಸುವಿಕೆ

**ಬೇಕಾದ ವಸ್ತುಗಳು :**

ಬಣ್ಣದ ಚೆಂಡುಗಳು ಅಥವಾ ಪೇಪರ್ ಪ್ಲೇಟ್ಸ್

ಮುಖಭಾವಗಳು : ಚೆಂಡಿನ ಮೇಲೆ ಪ್ರಾಥಮಿಕ ಭಾವಗಳ ಚಿತ್ರ ಬಿಡಿಸುವುದು, ನಗುವ ಮುಖ, ಕೋಪದ ಮುಖ, ಭಯದ ಮುಖ ಅಥವಾ ಪೇಪರ್ ಪ್ಲೇಟ್‌ನ ಮೇಲೂ ಚಿತ್ರ ಬಿಡಿಸಬಹುದು.



### ವಿಧಾನ

- ಮಕ್ಕಳಿಗೆ ಭಾವನೆಗಳ ಬಗ್ಗೆ ತಿಳಿಸುವುದು.
- ಮಕ್ಕಳಿಗೆ ಚಿತ್ರ ಬಿಡಿಸಿದ ಚೆಂಡುಗಳನ್ನು ಎಸೆಯುವುದು.
- ಯಾವ ಬಗೆಯ ಭಾವನೆಗಳು ಅಲ್ಲಿ ಮೂಡಿವೆ ಎಚಿಬುದನ್ನು ಮಕ್ಕಳಿಂದ ತಿಳಿಯುವುದು.
- ಎಲ್ಲರಿಗೆ ಕಾಣುವಂತೆ ಮಗು ಚೆಂಡು ಎತ್ತಿ ಹಿಡಿದು ಆ ಭಾವನೆ ಏನು ಎಂದು ತಿಳಿಸುವುದು.
- ಜೊತೆಗೆ ಪೇಪರ್ ಪ್ಲೇಟ್‌ಗಳನ್ನು ಒಬ್ಬರಿಂದ ಒಬ್ಬರಿಗೆ ನೀಡುತ್ತಾ ಈ ಆಟ ಆಡಬಹುದು.

# ಚಟುವಟಿಕೆ 32: ನನ್ನ ಭಾವನೆ

**ಬೇಕಾದ ವಸ್ತುಗಳು** : ಹಿಂದಿನ ಚಟುವಟಿಕೆಯಲ್ಲಿ ಬಳಸಿದ ಚೆಂಡು ಅಥವಾ ಪೇಪರ್ ಪ್ಲೇಟ್ಸ್





## ವಿಧಾನ


- 31ನೇ ಚಟುವಟಿಕೆಯ ಮುಂದುವರಿಸಿ.
- ಮಕ್ಕಳಲ್ಲಿ ಈ ಭಾವನೆಗಳು ಯಾವಾಗ ಮೂಡಿ ಬರುತ್ತವೆಂದು ತಿಳಿಯಿರಿ. ನಿಮಗೆ ಯಾವಾಗ ಸಂತಸವಾಗುತ್ತದೆ? ಯಾವಾಗ ಕೋಪ ಬರುತ್ತದೆ? ಅಥವಾ ಮಕ್ಕಳ ಸಂತಸದ ಕ್ಷಣಗಳು... ಇವುಗಳ ಬಗ್ಗೆ ತಿಳಿಯಿರಿ.
- ಮಕ್ಕಳ ಭಾವಗಳ ಬಗ್ಗೆ ವಿವರವಾಗಿ ತಿಳಿಯಿರಿ. ಘಟನೆಗಳು ಸಂದರ್ಭಗಳು ಭಾವನೆಯನ್ನು ಹೇಗೆ ಬದಲಿಸುತ್ತವೆ ಎಂಬುದನ್ನು ಗಮನಿಸಿ.




# ಚಟುವಟಿಕೆ 33: ಉಳಿದವರ ಭಾವನೆಗಳ ಬಗ್ಗೆ

**ಬೇಕಾದ ವಸ್ತುಗಳು** : ಹಿಂದಿನ ಚಟುವಟಿಕೆಯಲ್ಲಿ ಬಳಸಿದ ಚೆಂಡು ಅಥವಾ ಪೇಪರ್ ಪ್ಲೇಟ್ಸ್









## ವಿಧಾನ

- 32ನೇ ಚಟುವಟಿಕೆಯನ್ನು ಮುಂದುವರೆಸಿ.
- ನಾವೀಗ ನಮ್ಮ ಭಾವನೆಗಳನ್ನು ಕುರಿತು ಚರ್ಚಿಸಿದ್ದೇವೆ. ಉಳಿದವರ ಭಾವಗಳನ್ನು ಅರಿಯುವ.
- ಮಕ್ಕಳೊಡನೆ ಚರ್ಚಿಸುತ್ತಾ ನಿಮ್ಮ ಪೋಷಕರು / ಸ್ನೇಹಿತರು / ಶಿಕ್ಷಕರು ಸಂತೋಷ, ದುಃಖ, ಕೋಪದಲ್ಲಿದ್ದ ಸಂದರ್ಭಗಳನ್ನು ನೆನಪು ಮಾಡಿಕೊಳ್ಳಲು ಹೇಳುವುದು.



# ಚಟುವಟಿಕೆ 34: ಸಹಾಯ ಮನೋಭಾವ

**ಬೇಕಾದ ವಸ್ತುಗಳು** : ಯಾರಿಗೆ ಸಹಾಯ ಅಗತ್ಯವಿದೆಯೋ ಅಂತವರ ಚಿತ್ರಗಳು ಉದಾಹರಣೆಗೆ ರಸ್ತೆ ದಾಟುತ್ತಿರುವ ವೃದ್ಧರು, ಅಳುವ ಮಗು, ಹಾಸಿಗೆ ಹಿಡಿದವರು.





## ವಿಧಾನ

- ಮೊದಲು ಒಂದು ಚಿತ್ರವನ್ನು ಮಕ್ಕಳಿಗೆ ತೋರಿಸುವುದು.
- ಮೂರು ಪ್ರಶ್ನೆಗಳನ್ನು ಕೇಳುವುದು.
  - ನೀವು ಏನು ಕಾಣುತ್ತಿರುವಿರಿ?
  - ಆ ವ್ಯಕ್ತಿಗೆ ಏನಾಗಿದೆ?
  - ನೀವು ಹೇಗೆ ಅವರಿಗೆ ಸಹಾಯ ಮಾಡುತ್ತೀರಿ?
- ಪ್ರತಿ ಚಿತ್ರ ತೋರಿಸಿ ಹೀಗೆ ಕೇಳುವುದು.

ಸೂಚನೆ: ಈ ಚಿತ್ರಗಳು ಕೇವಲ ಉದಾಹರಣೆಗೆ ಬದುಕಿನ ಹಲವು ಉದಾಹರಣೆಗಳನ್ನು ಚರ್ಚಿಸಬಹುದು. ಹೊಸ ಹೊಸ ಚಿತ್ರಣಗಳನ್ನು ಮಕ್ಕಳಿಗೆ ನೀಡಬಹುದು.




## ಚಟುವಟಿಕೆ 35: ಭಾವನೆಗಳ ಬಗೆಗಿನ ಕಥೆಗಳು

**ಬೇಕಾದ ವಸ್ತುಗಳು** : ಕಥೆಗಳ ನಕ್ಷೆ / ಮನುಷ್ಯರ ಭಾವನೆಗಳು ವ್ಯಕ್ತವಾಗುವ ಚಿತ್ರಣಗಳು.



### ವಿಧಾನ

- ಮಕ್ಕಳಿಗೆ ಸ್ಪಷ್ಟವಾಗಿ ಕಾಣುವಂತೆ ಚಿತ್ರಣಗಳನ್ನು ತೋರಿಸಿ.
- ಚಿತ್ರದಲ್ಲಿ ಕಾಣುತ್ತಿರುವ ಪ್ರಾಣಿ / ವಸ್ತುಗಳು / ಮನುಷ್ಯರ ಬಗ್ಗೆ ಪ್ರಶ್ನೆ ಕೇಳಿ.
- ಕಥೆಯ ವಿವರಗಳನ್ನು ಚಿತ್ರ ತೋರಿಸುತ್ತಾ ಹೇಳಿ.
- ಕಥೆಯ ಕೊನೆಯಲ್ಲಿ ವ್ಯಕ್ತಿತ್ವ ಮತ್ತು ಭಾವನೆಗಳನ್ನು ಕುರಿತ ಪ್ರಶ್ನೆ ಕೇಳಿ. (ಉದಾಹರಣೆ ಕಥೆಯಲ್ಲಿ ಏನಾಯಿತು? ಆ ಹುಡುಗ / ಹುಡುಗಿಯ ಭಾವನೆ ಏನು? ಅವರ ದುಃಖಕ್ಕೆ ಕಾರಣವೇನು?
- ಮಕ್ಕಳಿಗೆ ಕಥೆ ಇಷ್ಟವಾಯಿತೇ, ಅವರು ಅದರಿಂದ ಏನು ಕಲಿತರು ಎಂದು ತಿಳಿಯುತ್ತಾ ಮಕ್ಕಳ ಅಭಿಪ್ರಾಯ ತಿಳಿಯಿರಿ.




ಸಮುದಾಯ ಮಕ್ಕಳ ಮತ್ತು ಕಿಶೋರ ಮಾನಸಿಕ ಆರೋಗ್ಯ ಸೇವೆಯ ಯೋಜನೆ
ಮಕ್ಕಳ ಮತ್ತು ಕಿಶೋರ ಮನೋವೈದ್ಯಕೀಯ ವಿಭಾಗ
ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ
ಹೊಸುರು ರೋಡ್, ಬೆಂಗಳೂರು – 560 029

Website: www.nimhans.ac.in
Email: capnimhans@gmail.com

ಬೆಂಬಲ – ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಕರ್ನಾಟಕ ಸರ್ಕಾರ

Design and Artwork: Dinesh Francis

ಮೊದಲ ಆವೃತ್ತಿ – ಆಗಸ್ಟ್ 2015

